**ಸಾಕ್ಷಿಯನ್ನು ದಿನಾಂಕ 12.12.2023 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 1 ಮತ್ತು 2 ನೇ ಪ್ರತಿವಾದಿಯರ ಪರ ಶ್ರೀ ಎನ್ ಕೆ ಡಿ ವಕೀಲರಿಂದಃ**

ನನ್ನ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣಪತ್ರದ ರೂಪದಲ್ಲಿ ನನ್ನ ಹೇಳಿಕೆಯಂತೆ ತಯಾರಿಸಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಸದರಿ ಈ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ವಾದಕ್ಕೆ ಪೂರಕವಾಗಿ

ನನ್ನ ಕುಟುಂಬದ ಪಡಿತರ ಚೀಟಿಯನ್ನು ಹಾಜರು ಮಾಡಿದ್ದು ಅದನ್ನು **ನಿಡಿ 1** ಎಂದು, 3 ನೇ ಪ್ರತಿವಾದಿಯ ಗಂಡನಾದ ವೆಂಕಟಶಿವಾರೆಡ್ಡಿ ರವರ ಮತದಾನದ ಗುರುತಿನ ಚೀಟಿಯನ್ನು ಹಾಜರು ಮಾಡಿದ್ದು ಅದನ್ನು **ನಿಡಿ 2** ಎಂದು ಗುರುತಿಸಲಾಯಿತು.

3 ನೇ ಪ್ರತಿವಾದಿಯ ಮತದಾನದ ಗುರುತಿನ ಚೀಟಿಯನ್ನು ಹಾಜರು ಅದನ್ನು **ನಿಡಿ 3** ಎಂದು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವಿಶೇಷ ತಹಸೀಲ್ದಾರ್ ಬೆಂಗಳೂರು ರವರು ಸಾಲ ಮರುಪಾವತಿ ಮಾಡದ ತಪ್ಪಿತಸ್ಥರಿಗೆ ದಿನಾಂಕ 04.09.2021 ರಂದು ನೀಡಿದ ನೋಟೀಸ್ ನ್ನು ಹಾಜರು ಮಾಡಿದ್ದು ಅದನ್ನು **ನಿಡಿ 4** ಎಂದು ಗುರುತಿಸಲಾಯಿತು.

ನಾನು ಕೆನರಾ ಬ್ಯಾಂಕಿನಲ್ಲಿ ಹೊಂದಿರುವ ಉಳಿತಾಯ ಖಾತೆಯ ಪಾಸ್ ಪುಸ್ತಕವನ್ನು ಹಾಜರು ಮಾಡಿದ್ದು ಅದನ್ನು **ನಿಡಿ 5** ಎಂದು ಗುರುತಿಸಲಾಯಿತು.

Ministry of Communications employees cooperative housing society limited ರವರಿಗೆ 3 ನೇ ಪ್ರತಿವಾದಿಯ ಗಂಡ ಪಾವತಿಸಿದ ಹಣದ 5 ರಸೀದಿಗಳನ್ನು ಹಾಜರು ಮಾಡಿದ್ದು ಅವುಗಳನ್ನು **ನಿಡಿ 6 ರಿಂದ 10** ಎಂದು ಗುರುತಿಸಲಾಯಿತು.

ದಿನಾಂಕ 13.01.2015 ರಂದು 3 ನೇ ಪ್ರತಿವಾದಿಯ ಗಂಡನಿಗೆ ಆರ್.ಟಿ.ಜಿ.ಎಸ್ ಮೂಲಕ ಹಣವನ್ನು ವರ್ಗಾಯಿಸಿದ ಬಗ್ಗೆ ಕೆನರಾ ಬ್ಯಾಂಕಿನ ಚಲನ್ ನ್ನು ಹಾಜರುಪಡಿಸಿದ್ದು ಅದನ್ನು **ನಿಡಿ 11** ಎಂದು, 4 ನೇ ಪ್ರತಿವಾದಿಯ ವಿಮೆಗೆ ಸಂಬಂಧಿಸಿದಂತೆ ಎಲ್.ಐ.ಸಿ ರವರು ಕಳುಹಿಸಿದ್ದ ಎರಡು ಪತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು **ನಿಡಿ 12 ಮತ್ತು 13** ಎಂದು, ಬೆಂಗಳೂರಿನಲ್ಲಿ 3 ನೇ ಪ್ರತಿವಾದಿಯ ಗಂಡ ದಾವಾ ಐಟಂ.7 ರಲ್ಲಿ ಮನೆ ನಿರ್ಮಿಸಲು ಪಡೆದ ನೀಲಿ ನಕಾಶೆಯನ್ನು ಹಾಜರು ಮಾಡಿದ್ದು ಅದನ್ನು **ನಿಡಿ 14** ಎಂದು ಗುರುತಿಸಲಾಯಿತು.

**(ನಿಡಿ 3, 4, 6 ರಿಂದ 13 ನ್ನು 3 ಮತ್ತು 4 ನೇ ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ರುಜುವಾತು ಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ನಿಶಾನೆಯಾಗಿ ಗುರುತಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯಕೋರಿದ್ದರಿಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.